**<u>ಸಾಕ್ಷಿಯನ್ನು ದಿನಾಂಕಃ 20-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಎ.ಜಿ.ಪಿ ರವರು ಪಾಟೀ ಸವಾಲು ಇಲ್ಲ ಎಂದು ನುಡಿದಿರುವರು.</u>**

**<u>ಪಾಟೀ ಸವಾಲುಃ 4(ಬಿ) ಮತ್ತು (ಸಿ) ಪ್ರತಿವಾದಿ ಪರ ಶ್ರೀ ಪಿ.ಜೆ.ಜಿ ವಕೀಲರಿಂದಃ</u>**

ಸರ್ವೆ ನಂ 19 ಎ ಇನಾಮು ಭೂಮಿ ಅಂದರೆ ಸರಿಯಲ್ಲ. ನಿಪಿ 14 ರಲ್ಲಿ ಸರ್ವೆ ನಂ 19 ಎ ಇದು ಇನಾಮು ಭೂಮಿ ಎಂದು ಉಲ್ಲೇಖ ಇದೆ ಅಂದರೆ ನನಗೆ ಗೊತ್ತಿಲ್ಲ. 1968 ನೇ ಸಾಲಿನಿಂದ ದಾವಾ ಅಸ್ತಿಯ ಪಹಣಿ ಪತ್ರಿಕೆಗಳು ಮಳ್ಳಾಪುರ ನಾಗಪ್ಪ, ಕೊಟ್ರಪ್ಪ, ರೇವಣ ಸಿದ್ದಪ್ಪ ಮತ್ತು ನಾಗಮ್ಮ ಇವರ ಹೆಸರುಗಳಲ್ಲಿ ಬಂದಿರುತ್ತದೆ. ಸದರಿ ಅವರ ಹೆಸರುಗಳು ನಿಪಿ 1 ರಲ್ಲಿ ಕಂಡು ಬರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ವಂಶಸ್ತರ ಹೆಸರು ಇರುವುದು ಎಂದು ನುಡಿದಿರುವರು. ಶಿವಪೂಜಿ ಚೆನ್ನಬಸ್ಸಪ್ಪ ಮತ್ತು ಶಿವಪೂಜಿ ಶಿವಪ್ಪ ಇವರು ಶಿವಪೂಜಿ ಇವರ ವಂಶಸ್ಥರು. ನಿಪಿ 1 ರಲ್ಲಿ ಯಾರ ಯಾರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳು ಇವೆ ಎಂದು ಕಂಡು ಬರುವುದಿಲ್ಲ ಅಂದರೆ ಸರಿಯಲ್ಲ. ಮುಂದಿನ ಪುಟದಲ್ಲಿರುವುದು. ಶಿವಪೂಜ ಶಿವಪ್ಪ ಇವರು ಇನಾಮು ರದ್ಧತಿ ಮಂಡಳಿ ಮುಂದು ತಾವು ಸ್ವಾಧಿನದಲ್ಲಿರುವ ಜಮೀನು ಸಂಬಂದಿಸಿದಂತೆ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಶಿವಪೂಜಿ ಶಿವಪ್ಪ ನ ಹೆಸರಿಗೆ 4 ಸೆನ್ಸ ಜಮೀನು ಮತ್ತು ಶಿವಪೂಜ ಕೊಟ್ರಪ್ಪ ಇವರ ಹೆಸರಿಗೆ 2 ಎಕರೆ ಜಮೀನು ಇನಾಮು ರದ್ದತಿಗೊಂಡು ಮಂಜುರಾಗಿರುತ್ತದೆ ಅಂದರೆ ಸರಿಯಲ್ಲ. ಆ ಪ್ರಕಾರ ಖಾತೆ ಕೂಡ ಅಗಿರುತ್ತದೆ ಅಂದರೆ ಸರಿ. ಇನಾಮು ರದ್ಧತಿ ಮಂಡಳಿಯ ಮುಂದೆ ನಾನು ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ಅದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ ಅಂದರೆ ಸರಿ. ನಾನು ದಾವೆಲ್ಲಿ ಕಾಣಿಸಿರುವಂತೆ 20 ಸೆನ್ಸಗೆ ಸಂಬಂದಿಸಿದಂತೆ ಇನಾಮು ರದ್ಧತಿ ಮಂಡಳಿಯ ಮುಂದೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ನನಗೆ ದಾವಾ ಸ್ವತ್ತು ಸಂಬಂದಿಸಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ 16 ಇಸಿ ದಾಖಲೆಯಲ್ಲ್ಲೊ ಕಂಡು ಬರುವ ವ್ಯವಹರಣೆಗಳನ್ನು ತೋರಿಸುವ

ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ ಅಂದರೆ ಕೆಲವನ್ನು ಹಾಜರು ಪಡಿಸಿದ್ದೇನೆ ಕೆಲವು ಸಿಕ್ಕಿರುವುದಿಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹಿತ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

20-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ.**